**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ಃ 252/2022**

**ಫಿರ್ಯಾದುದಾರರುಃ** ರಾಜ್ಯದ ಪರ ಆಲೂರು ಪೊಲೀಸ್ ಠಾಣೆ

ವಿರುದ್ಧ

**ಆರೋಪಿಃ** **ಸತೀಶ**

**ಃದೋಷಾರೋಪಣೆಃ**

ಹಾಸನದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧಿಶನಾದ ಟಿ.ಎಸ್. ಇನವಳ್ಳಿ, ನಾನು,

ಆರೋಪಿಯಾದ,

ಸತೀಶ ,
ತಂದೆ ಲೇಟ್ ಶಿವಮಣಿ,
ವಯಸ್ಸು 46 ವರ್ಷ,
4 ನೇ ಬ್ಲಾಕ್,
ಹಾರಂಗಿ ರಸ್ತೆ,
ಕುಶಾಲನಗರ ಟೌನ್,
ಕುಶಾಲನಗರ ತಾಲ್ಲೂಕು,
ಕೊಡಗು.

ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕಃ 04.06.2022 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ಆಲೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಆಲೂರು ತಾಲ್ಲೂಕು ಕಿತ್ತಗಳಲೆ ಗ್ರಾಮದ ವಾಸಿ ಚಾಸಾ-4 ಸದಾನಂದ ಇವರಿಗೆ ಸೇರಿದ ದಕ್ಷಿಣ ಭಾಗದಲ್ಲಿರುವ ಲೈನ್ ಮನೆಯಲ್ಲಿ ನೀವುನ ಆರೋಪಿ ಮತ್ತು ಮೃತ ಆನಂದ ಮದ್ಯಪಾನ ಮಾಡಿದ್ದು, ಪುನಃ ಮೃತ ಆನಂದನು ನಿನಗೆ ಆರೋಪಿ ಇನ್ನೂ ಮದ್ಯ ಬೇಕು, ಕೆ.ಹೊಸಕೋಟೆಯಿಂದ ಮದ್ಯ ತೆಗೆದುಕೊಂಡು ಬಾ ಎಂದು ಗಲಾಟೆ ಮಾಡಿಕೊಳ್ಳುತ್ತಿದ್ದು, ಆಗ ಚಾಸಾ-1 ಪ್ರಸನ್ನ ಚಾಸಾ-2 ರಾಜು ಮತ್ತು ಚಾಸಾ-3 ಮಂಜ ಇವರು ಆ ರೀತಿ ಏಕೆ ಗಲಾಟೆ ಮಾಡಿಕೊಳ್ಳುತ್ತಿದ್ದೀಯಾ ಸುಮ್ಮನೆ ಮಲಗಿಕೊಳ್ಳಿ ಎಂದು ಹೇಳಿದರೂ ಸಹ, ಮೃತ ಆನಂದ ಮತ್ತೆ ಮದ್ಯ ಬೇಕು ಎಂದು ಗಲಾಟೆ ಮಾಡುತ್ತಿದ್ದಾಗ ನೀವು ಆರೋಪಿ ಆತನಲ್ಲಿ, ನೀನು ಕುಡಿದಿರುವ ಮದ್ಯವೇ ಸಾಕು,

ಇನ್ನು ಯಾವ ಮದ್ಯ ಬೇಕು ನಿನಗೆ ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಮೃತನಿಗೆ ಸಾರ್ವಜನಿಕ ಶಾಂತಿಗೆ ಭಂಗ ಮಾಡುವ ರೀತಿಯಲ್ಲಿ ಪ್ರಚೋದನೆ ಮಾಡಿರುತ್ತೀರಿ ಮತ್ತು ಈ ಕಾರಣದಿಂದ ನೀನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ, ಈ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀವು ಆರೋಪಿ ಮೃತ ಆನಂದನಿಗೆ ಅವಾಚ್ಯ ಶಬ್ದಗಳಿಂದ ಬೈದು, ಆತನನ್ನು ಕೊಲೆ ಮಾಡುವ ಉದ್ದೇಶದಿಂದ ನೀನು ಬದುಕಿದ್ದರೆ ತಾನೆ ಮದ್ಯ ಕೇಳುವುದು ಮತ್ತು ಮದ್ಯ ಕುಡಿದು ನನ್ನಜೊತೆ ಆಗಾಗ ಗಲಾಟೆ ಮಾಡುವುದು ಎಂದು ಹೇಳಿ, ಅಲ್ಲೇ ಪಕ್ಕದಲ್ಲಿದ್ದ ಕಬ್ಬಿಣದ ಸುತ್ತಿಗೆ ತೆಗೆದುಕೊಂಡು ಆನಂದನ ತಲೆಗೆ ಹೊಡೆದು ಅಲ್ಲೇ ಇದ್ದ ಒಂದು ದೊಣ್ಣೆಯಿಂದ ಆನಂದನ ಕೈ-ಕಾಲಿಗೆ ಹೊಡೆದು, ಆತನನ್ನು ಕೊಲೆ ಮಾಡಿರುತ್ತೀರಿ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 302 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಮೂರನೆಯದಾಗಿ, ಈ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀನು ಆರೋಪಿ ಮೃತ ಆನಂದನನ್ನು ಕೊಲೆ ಮಾಡಿ ನಂತರ ಸದರಿ ಕೊಲೆಗೆ ಸಂಬಂಧಪಟ್ಟ ಸಾಕ್ಷಿ ಮತ್ತು ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಶವವನ್ನು ಲೈನ್ ಮನೆ ಮುಂಭಾಗದಲ್ಲಿ ನಿರ್ಮಿಸುತ್ತಿದ್ದ ಫೌಂಡೇಷನ್ ಮೇಲೆ ಮಲಗಿಸಿರುತ್ತೀರಿ ಮತ್ತು ಈ ಕಾರಣದಿಂದ ನೀನು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 201 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀನು ಆರೋಪಿ ಮೃತ ಆನಂದನನ್ನು ಕೊಲೆ ಮಾಡಿ, ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಆತನ ಶವವನ್ನು ಈ ಮೇಲೆ ಹೇಳಿರುವ ಫೌಂಡೇಶನ್ ಮೇಲೆ ಮಲಗಿಸಿ, ಚಾಸಾ-1 ರಿಂದ ಚಾಸಾ-3 ನೇಯವರನ್ನುದ್ದೇಶಿಸಿ, ಆ ವಿಷಯವನ್ನು ಯಾರಿಗಾದರೂ ತಿಳಿಸಿದರೆ ನಿಮಗೂ ಸಹ ಅದೇ ಗತಿ ಕಾಣಿಸುತ್ತೇನೆ ಎಂದು ಹೇಳಿ ಚಾಸಾ-1 ರಿಂದ ಚಾಸಾ-3 ನೇಯವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ ಮತ್ತು ಈ ಕಾರಣದಿಂದ ನೀನು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ

ಅಪರಾಧ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕು ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 28 ನೇ ಮಾರ್ಚ್ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ಃ 252/2022**

**ಫಿರ್ಯಾದುದಾರರುಃ** ರಾಜ್ಯದ ಪರ ಆಲೂರು ಪೊಲೀಸ್ ಠಾಣೆ

ವಿರುದ್ಧ

**ಆರೋಪಿಃ** ಸತೀಶ

| | | |
|---|---|---|
| ಆರೋಪಿಯ ಹೆಸರು | ಃ | ಸತೀಶ |
| ತಂದೆಯ ಹೆಸರು | ಃ | ಲೇಟ್ ಶಿವಮಣಿ |
| ವಯಸ್ಸು | ಃ | 46 ವರ್ಷ |
| ವೃತ್ತಿ | ಃ | |
| ವಾಸ | ಃ | ವಾಸ 4 ನೇ ಬ್ಲಾಕ್ ಹಾರಂಗಿ ರಸ್ತೆ,<br>ಕುಶಾಲನಗರ ಟೌನ್, ಕುಶಾಲನಗರ,<br>ಕೊಡಗು ಜಿಲ್ಲೆ. |

**ಃಆಪಾದನೆಃ**

ಪ್ರಶ್ನೆ 1ಃ ಈಗ ನಿನಗೆ ಓದಿ ಹೇಳಿದ ದೋಷರೋಪಣೆಯನ್ನು ಅರ್ಥ ಮಾಡಿಕೊಂಡಿರುವೆಯಾ?

ಉತ್ತರಃ

ಪ್ರಶ್ನೆ 2ಃ ತಪ್ಪು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಗೆ ಒಳಪಡುತ್ತೀಯಾ?

ಉತ್ತರಃ

**ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಆತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.**

**ದಿನಾಂಕ 28 ನೇ ಮಾರ್ಚ್ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**